## - 6 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಐಕ್ಯತೆಯ ಕೇವಲ ತಳಹದಿ

ಪರಿಶುದ್ಧಾತ್ಮನು, ಹೊಸ ಒಡಂಬಡಿಕೆಯಲ್ಲಿ ತನ್ನ ಬೋಧನೆಯಲ್ಲಿ, ದೇವರ ಜನರು ಒಂದೇ ಹೃದಯದವರೂ ಒಂದೇ ಆತ್ಮದವರೂ ಆಗಿರಬೇಕೆಂದು ಬಯಸುತ್ತಾನೆ. ಕ್ರಿಸ್ತನಲ್ಲಿಯ ವಿಶ್ವಾಸಿಗಳಲ್ಲಿ ವಿಭಜನೆಗಳು ಪಾಪಭರಿತವಾದವುಗಳೂ ನಿಜವಾದ ಕ್ರೈಸ್ತತ್ವಕ್ಕೆ ನಾಶನಕರವಾದವುಗಳೂ ಎಂಬುದನ್ನು ತಿಳಿಯದವನು ಬೈಬಲ್ ಬೋಧನೆಯ ಅತೀ ಸರಳವಾದದ್ದನ್ನು ಕಡೆಗಣಿಸಿದ್ದಾನೆ. "ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು!" (ಕೀರ್ತನೆ 133:1).

ಯೇಸುವು ತನ್ನ ತಂದೆಗೆ ಹೀಗೆ ಪ್ರಾರ್ಥಿಸಿದನು,

> ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೊಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ ... ತಿಳಿದು ಬರುವದು (ಯೋಹಾನ 17:20-23).

ಜಗತ್ತಿನಲ್ಲಿ ಪ್ರತಿಯೊಬ್ಬ ವಿಶ್ವಾಸಿಯು, ತಂದೆ ಮತ್ತು ಕುಮಾರ ಒಂದಾಗಿರುವಂತೆ, ಪ್ರತಿಯೊಬ್ಬ ಇತರ ವಿಶ್ವಾಸಿಯೊಂದಿಗೆ ಒಂದಾಗಿರಬೇಕೆಂದು ಮಾಡಿದ ರಕ್ಷಕನ ಪ್ರಾರ್ಥನೆಯು, ಕ್ರಿಸ್ತನ ಜನರ ಐಕ್ಯತೆಯ ಸಿದ್ಧಾಂತಕ್ಕೆ ಕ್ರಿಸ್ತನನ್ನು ನಿಜವಾಗಿ ಪ್ರೀತಿಸುವವರನ್ನು ಮಾರ್ಪಡಿಸುವದಕ್ಕೆ ಸಾಕಷ್ಟಾಗುತ್ತದೆ. ಯೇಸುವು ತನ್ನ ಆಳವಾದ ಚಿಂತನೆಯ ತಾಸಿನಲ್ಲಿ ಈ ಸಂಗತಿಗಾಗಿ ಬೇಡಿಕೊಂಡದ್ದು ಪ್ರತಿಯೊಬ್ಬ ಶಿಷ್ಯನಿಗೆ ಇದನ್ನು ಮಹತ್ವದ್ದನ್ನಾಗಿ ಮಾಡುತ್ತದೆ; ಇದು ಪ್ರತಿಯೊಬ್ಬರ ಮೇಲೆ ಭಾರವಾಗಿರಬೇಕು. ಈ ಅಗತ್ಯತೆಗಾಗಿ ಒಡೆಯನ ಉದ್ದೇಶವನ್ನು ಒಬ್ಬನು ತಿಳಿಯುವಾಗ ಇದು ಹೀಗಾಗುತ್ತದೆ. ವಿಭಜಿಸುವ ಈ ದುಃಖಕರವಾದ ಪಾಪವು ಮಾಡುವಂತೆ ಬೇರೆ ಯಾವ ಪಾಪವೂ ಕ್ರಿಸ್ತನಲ್ಲಿ ವಿಶ್ವಾಸಕ್ಕೆ ಬರುವಂತೆ ಜಗತ್ತನ್ನು ಅಷ್ಟು ಅಡ್ಡೀಪಡಿಸುವಂಥದ್ದಾಗಿರುವದಿಲ್ಲ.

"ಸಹೋದರರೇ, ... ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ" (1 ಕೊರಿಂಥ 1:10) ಎಂದು ಪೌಲನು ಬರೆದನು. ಐಕ್ಯತೆಗಾಗಿ ಅಂಥ ಪರಿಶುದ್ಧಾತ್ಮನ ಬೇಡಿಕೆಗಳೊಂದಿಗೆ, ನಿಜವಾದ ಆತ್ಮವು, ವಿಧೇಯ ಹೃದಯವು, ಈ ಪಾಪವನ್ನು ನಮ್ಮ ಮಧ್ಯದಲ್ಲಿ

ಹೇಗೆ ಹಗುರವಾಗಿ ತೆಗೆದುಕೊಳ್ಳಬಹುದು? ಪ್ರತಿಯೊಬ್ಬ ಇತರ ಶಿಷ್ಯನೊಂದಿಗೆ ಒಂದಾಗಿರಲು, ಪರಿಶುದ್ಧಾತ್ಮನಿಂದ ಸ್ಪಷ್ಟವಾಗಿ ಕೇಳಲ್ಪಡದ ಯಾವುದನ್ನಾದರೂ ಮತ್ತು ಪ್ರತಿಯೊಂದನ್ನು ಬಿಟ್ಟುಕೊಡುವುದು ತನ್ನ ಜವಾಬ್ದಾರಿಕೆಯೆಂದು ತಿಳಿಯುವಲ್ಲಿ ಯಾರು ಸೋತು ಹೋಗುವರು? ಕ್ರೈಸ್ತರಲ್ಲಿ ವಿಭಜನೆಗಳನ್ನು ಮುಂದುವರಿಸಿಕೊಂಡು ಹೋಗುವ, ಧರ್ಮದಲ್ಲಿಯ ಯಾವುದೇ ಆಚರಣೆಗಳನ್ನು ಹಿಡಿದುಕೊಂಡಿರುವವರೆಗೆ ಒಬ್ಬನು ಪಾಪಭರಿತವಾಗಿ ಅಪರಾಧಿಯೆಂದು ಭಾವಿಸಬೇಕು.

ಧಾರ್ಮಿಕ ಜಗತ್ತಿನಲ್ಲಿ ಎರಡು ನಿಜವಾದ ಕಾರಣಗಳು ವಿಭಜನೆಗಳನ್ನು ಶಾಶ್ವತ ವಾಗಿ ಉಳಿಸುವವು. ಒಂದು ಕಾರಣವು ಅನೇಕ ಜನರು - ಒಳ್ಳೇ ಭಕ್ತಿಯುಳ್ಳ ಜನರೂ ಸಹ - ಅದನ್ನು ಒಂದು ಪಾಪವೆಂದು ಎಂದೂ ತಿಳಿಯುವದಿಲ್ಲ, ಆದರೆ ಅದನ್ನು ಹಗುರ ವಾಗಿ ತೆಗೆದುಕೊಂಡು, ಅದರ ಕಡೆಗೆ ಗಮನ ವಹಿಸುವದಿಲ್ಲ. ಇನ್ನೊಂದು ಕಾರಣವು, ಅನೇಕರು ಭಕ್ತಿಯುಳ್ಳ ಹಾಗೂ ನಂಬಿಗಸ್ತಿಕೆಯ ಹೃದಯಗಳೊಂದಿಗೆ, ಅಸ್ತಿತ್ವದಲ್ಲಿರುವ ಭೇದಕ್ಕೆ ದುಃಖಪಡುವವರು, ತೊಂದರೆಯು ಪರಿಹರಿಸಲಾರದಷ್ಟು ಆಳವಾಗಿ ಇರುತ್ತದೆಂದು ಯೋಚಿಸುವುದು. ಯಾವುದೇ ಗುಂಪು ನಮ್ಮ ಕರ್ತನು ಬೋಧಿಸಿದ ಮತ್ತು ಆಜ್ಞಾಪಿಸಿದ ಸಂಗತಿಯನ್ನು ಕಾರ್ಯರೂಪಕ್ಕೆ ತರಲು ಯಾವುದೇ ಪ್ರಯತ್ನ ಮಾಡುವದಿಲ್ಲ; ಪ್ರತಿಯೊಂದೂ ದೇವರಿಗೆ ಅವಿಧೇಯತೆಯಲ್ಲಿ ಮುಂದುವರಿಯುತ್ತವೆ.

ಆದಾಗ್ಯೂ, ಕೆಲವರು, "ಒಬ್ಬರೇಯಾಗಿ ದ್ರಾಕ್ಷೆಯನ್ನು ತುಳಿಯಲು" (ಯೆಶಾಯ 63:3) ಯೇಸುವಿಗೆ ವಿಧೇಯರಾಗಲು ಸಿದ್ಧರಿರುವರು, ತಾರ್ಸದ ಸೌಲನಂತೆ, ಅವರು ತಮ್ಮ ಹೃದಯಗಳಲ್ಲಿ "ಕರ್ತನೇ, ನಾನೇನು ಮಾಡಬೇಕು?" (ಅಪೊಸ್ತಲರ ಕೃತ್ಯಗಳು 22:10) ಎಂದು ಕೂಗುತ್ತಿರುವರು. ಅವರು ವ್ಯಾಪಾರವನ್ನು ಇಲ್ಲವೇ ಸಾಮಾಜಿಕ ಸ್ಥಾನವನ್ನು ಬಿಟ್ಟುಕೊಟ್ಟು, "ಅಪಹಾಸ್ಯಕ್ಕೆ ಗುರಿಯಾಗುವವರೂ" "ಲೋಕದ ಕಸವೋ ಎಲ್ಲಾದರ ಹೊಲಸೋ" ಆಗಲು ಸಿದ್ಧರಾಗಿದ್ದಾರೆ (1 ಕೊರಿಂಥ 4:13ಬಿ), ಅದರಿಂದ ತಮ್ಮ ಕರ್ತನನ್ನು ಮೆಚ್ಚಿಸುವವರೂ, ಆತನ ಚಿತ್ತವನ್ನು ಮಾಡುವವರೂ ಆಗಲು ಬಯಸುತ್ತಾರೆ. ಇವರಿಗಾಗಿ, ನಾನು ಬರೆಯುತ್ತೇನೆ.

ದೇವರ ಜನರ ಮಧ್ಯದಲ್ಲಿ ಐಕ್ಯತೆಯ ಸುಂದರವಾದ ಪರಿಣಾಮವನ್ನು ಸಭಾಪಂಗಡವು ಪೂರ್ತಿಗೊಳ್ಳುವವರೆಗೆ ಎಂದೂ ತಲುಪಲಾಗುವುದಿಲ್ಲ. ಅದನ್ನು ಪ್ರೋತ್ಸಾಹಿಸುವವನು ಯೇಸುವು ಪ್ರಾರ್ಥಿಸಿದಕ್ಕೆ ಮಹಿಮೆಯುಳ್ಳ ಅಂತ್ಯವನ್ನು ಸಾಧಿಸುವ ಪ್ರಯತ್ನಗಳಿಗೆ ಆತಂಕವನ್ನೊಡ್ಡುವದನ್ನು ಪ್ರೋತ್ಸಾಹಿಸುವವನಾಗಿದ್ದಾನೆ. ಅಂಥವನು ಧಾರ್ಮಿಕ ಜಗತ್ತಿನಲ್ಲಿ ಅತಿದೊಡ್ಡ ಕೆಟ್ಟತನವನ್ನು ಪ್ರೋತ್ಸಾಹಿಸುವವನಾಗಿದ್ದಾನೆ. ಅದನ್ನು ಯೋಚಿಸಿರಿ: ಜಗತ್ತಿನಲ್ಲಿಯ ಅತ್ಯುತ್ತಮ ಜನರು (ಹೃದಯದಲ್ಲಿ), ಕೆಲವು ಇತರ ಸಂಗತಿಗಳನ್ನು ಮಾಡಿದಂತೆ, ಜಗತ್ತಿನಲ್ಲಿ ಕ್ರಿಸ್ತನ ಕಾರ್ಯಕ್ಕೆ ಆತಂಕವನ್ನೊಡ್ಡುವಂಥವು ಗಳನ್ನು ಬೆಂಬಲಿಸುತ್ತಾ, ನೋಡುತ್ತಾ, ಪ್ರೋತ್ಸಾಹಿಸುತ್ತಾ ಇದ್ದಾರೆ.

ಇಡೀ ಸಭಾಪಂಗಡದ ಸಭೆಗಳು "ಸರಣಿಯನ್ನು ಮುರಿದು" "ಅವಳಿಂದ ಹೊರಗೆ ಬರುವವು" (ನೋಡಿರಿ ಪ್ರಕಟನೆ 18:4) ಎಂದು ನಾವು ಬಯಸುವೆವು, ಆದರೆ ನೈಜತೆಯಲ್ಲಿ ಅದಕ್ಕಾಗಿ ನಾವು ನಿರೀಕ್ಷಿಸಲಾರೆವು. ಸಭಾಪಂಗಡತ್ವವನ್ನು ಅದರ ಮುಂದಿನ ಪ್ರಗತಿಯಲ್ಲಿ ತಡೆಹಿಡಿಯಲು ಒಂದೇ ಮಾರ್ಗವು ವೈಯಕ್ತಿಕ ವ್ಯಕ್ತಿಗಳು, ಅದರ ದುಷ್ಟತ್ವಗಳನ್ನು ನೋಡುವುದಾಗಿದೆ. ಆ ಮೇಲೆ ಅವರು ಅದನ್ನು ಬಿಟ್ಟುಬಿಡಬೇಕು, ಅಲ್ಲಗಳೆಯಬೇಕು, ಮತ್ತು ಹೊಸ ಒಡಂಬಡಿಕೆಯ ಕ್ರೈಸ್ತರಿದ್ದಂಥ ಕ್ರೈಸ್ತರಾಗುವುದು. ಮೊದಲಿನ ಕ್ರೈಸ್ತರು ಇದ್ದಂಥ ರೀತಿಯಲ್ಲಿ ಕ್ರೈಸ್ತರಾಗಿರುವುದು ಅಂದರೆ ಸಂಪೂರ್ಣವಾಗಿ ಪರಿಶುದ್ಧಾತ್ಮನಿಂದ ನಡಿಸಲ್ಪಡುವುದು - ಎಲ್ಲಾ ಸತ್ಯದಲ್ಲಿ

ಜನರಿಗೆ ಮಾರ್ಗದರ್ಶನ ಮಾಡಲು ಈ ಲೋಕದೊಳಗೆ ಆತನು ಬಂದಾಗ ನಡಿಸಿದಂತೆ ಬೋಧಿಸುವುದು, ಕಾರ್ಯಮಾಡುವುದು, ಸೇವೆ ಮಾಡುವುದು ಮತ್ತು ಆರಾಧಿಸುವುದು ಆಗಿದೆ. ಮಾನವರೊಂದಿಗೆ ಆತನ ಕಾರ್ಯವನ್ನು ಪುನಃ ನಾವು ಮಾಡಿದರೆ, ಹೊಸ ಒಡಂಬಡಿಕೆಯ ಕ್ರೈಸ್ತರಿದ್ದಂತೆ ಸಂಪೂರ್ಣವಾಗಿ ಸಭಾಪಂಗಡದಿಂದ ಸ್ವತಂತ್ರರಾಗಿರುವ ಕ್ರೈಸ್ತರಾಗಿರುವುದು ನಿಶ್ಚಿತವಾಗಿದೆ.

ಪರಿಶುದ್ಧಾತ್ಮನು ಅವರಿಗೆ ಮಾರ್ಗದರ್ಶನ ಮಾಡಲು ಬರುವವರೆಗೆ, ಪ್ರಥಮ ಕ್ರೈಸ್ತರು ಲೋಕವನ್ನು ರಕ್ಷಿಸುವ ಮಹಾ ಕಾರ್ಯವನ್ನು ಪ್ರಾರಂಭಿಸಲು ಯೇಸು ಬಿಡಲಿಲ್ಲ. "ಕಾದುಕೊಂಡಿರಬೇಕು," "ತಡಮಾಡಬೇಕು" ಎಂಬುದು ಆಜ್ಞೆಯಾಗಿತ್ತು. ಅವರು ಅದನ್ನು ಮಾಡಿದರು, ಆತನು ಬಂದನು ಮತ್ತು ಆ ಶಿಷ್ಯರಲ್ಲಿ ಮತ್ತು ಶಿಷ್ಯರೊಂದಿಗೆ ಆತನ ಪ್ರಥಮ ಕಾರ್ಯವನ್ನು ಪರೀಕ್ಷಿಸುತ್ತಿದ್ದೇವೆ. ಇಂದು ಅದೇ ಆತ್ಮನಿಂದ ಆತನ ಶಿಷ್ಯರು ನಡಿಸಲ್ಪಡಬೇಕೆಂಬುದಕ್ಕಿಂತ ಹೆಚ್ಚಾಗಿ ತನ್ನ ಪ್ರಥಮ ಶಿಷ್ಯರು ಪರಿಶುದ್ಧಾತ್ಮನಿಂದ ನಡಿಸಲ್ಪಡಬೇಕೆಂದು ಆಸಕ್ತನಾಗಿದ್ದನೋ? ಪರಿಶುದ್ಧಾತ್ಮನ ಮಾರ್ಗದರ್ಶನವಿಲ್ಲದೇ ಅವರು ತಮ್ಮ ಕಾರ್ಯದಲ್ಲಿ ಮುಂದುವರಿಯುವದನ್ನು ಆತನು ಬಿಡದಿದ್ದರೆ, ಅದೇ ಮಾರ್ಗದರ್ಶನವಿಲ್ಲದೇ ನಾವು ಮುಂದೆ ಹೋಗಲು ಆತನು ಬಿಡುವನೋ? ಇಂದು ಯಾವನಾದರೂ ನಂಬಿಗಸ್ತಿಕೆಯಿಂದ ಮತ್ತು ಹೃದಯದಿಂದ, ಪುರಾತನ ಶಿಷ್ಯರನ್ನು ನಡಿಸಲು ಬಂದಾಗ ಪರಿಶುದ್ಧಾತ್ಮನು ಮಾಡಿದ ಕಾರ್ಯವನ್ನು ಸ್ಪಷ್ಟವಾಗಿ ಅನುಸರಿಸುವವನು ನಿಶ್ಚಯವಾಗಿಯೂ ಪರಿಶುದ್ಧಾತ್ಮನ ಮಾರ್ಗದರ್ಶನವನ್ನು ಅನುಸರಿಸುತ್ತಿರುವನು. ನಾವು ತಿಳಿದಿರುವ ಮಟ್ಟಿಗೆ, ಆತನಿಂದ ನಡಿಸಲ್ಪಡುವೆವು ಅದೊಂದೇ ಮಾರ್ಗವಾಗಿದೆ.

ಅವರೊಂದಿಗೆ ಇದ್ದಂಥ ಆತನ ಕಾರ್ಯವು ನಮ್ಮ ಉದಾಹರಣೆಯೂ ನಮ್ಮ ಮಾರ್ಗದರ್ಶನವೂ ಆಗಿರಬೇಕು, ಮತ್ತು ಈ ದೈವಿಕ ಮಾದರಿಗೆ ನಮ್ಮ ಕಾರ್ಯವು ಸತ್ಯವಾದದ್ದಾಗಿರತಕ್ಕದ್ದು; ಕಾರ್ಯದ ಪ್ರತಿಯೊಂದು ಹಂತವನ್ನು ಪ್ರಮಾಣಿಕ ವಾಗಿಯೂ ಜಾಗರೂಕತೆಯಿಂದಲೂ ಪರೀಕ್ಷಿಸತಕ್ಕದ್ದು. ಈ ಮೊದಲನೆಯ ಕಾರ್ಯವು ಯೇಸುವಿನ ಬಗ್ಗೆ ಪ್ರಸಂಗಿಸುವದನ್ನೂ ಕೇಳುವದನ್ನೂ ಭರವಸೆಯಿಂದ ತಿಳಿಯುವದನ್ನೂ ಮಾನಸಾಂತರಪಡುವದನ್ನೂ ಮತ್ತು ಆಮೇಲೆ ಬಾಪ್ತಿಸ್ಮ ಹೊಂದುವದನ್ನೂ ಒಳಗೊಂಡಿತ್ತು ಎಂದು ನಾವು ನೋಡುತ್ತೇವೆ. ಆಗ ಈ ವಿಧಾನವನ್ನು ಅನುಸರಿಸುವವನು, ಯೇಸುವಿನ ಪುನರುತ್ಥಾನದ ನಂತರ ಮೊದಲನೆಯ ಪಂಚಾಶತ್ತಮದ ದಿನದಂದು ಪೇತ್ರನು ಮತ್ತು ಅವನ ಕೇಳುಗರು ಮಾಡಿದಂತೆ ಪರಿಶುದ್ಧಾತ್ಮನ ಮಾರ್ಗದರ್ಶನವನ್ನು ಅನುಸರಿಸುತ್ತಿರುವನು; ಅಂಥ ಪ್ರಸಂಗಿಯು ಯೇಸುವನ್ನು ಆತನು ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಲ್ಪಟ್ಟಂತೆ ಪ್ರಸಂಗಿಸುವವನು ಮತ್ತು ತನ್ನ ಕೇಳುಗರಿಗೆ, ಶಿಲುಬೆಗೆ ಹಾಕಲ್ಪಟ್ಟ ಯೇಸುವು ಕರ್ತನೂ ಕ್ರಿಸ್ತನೂ ಆಗಿದ್ದಾನೆಂದು ಭರವಸೆಯಿಂದ ತಿಳಯಬೇಕು ಎಂದು ಬೇಡಿಕೊಳ್ಳುತ್ತಾನೆ ಮತ್ತು ಅದನ್ನು ತಿಳಿದುಕೊಳ್ಳುವ ಎಲ್ಲರೂ ಮಾನಸಾಂತರ ಪಡಬೇಕು ಮತ್ತು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿಕೊಳ್ಳಬೇಕು ಎಂದು ಆಜ್ಞಾಪಿಸುತ್ತಾನೆ. ವಿವಿಧ ಸಭಾಪಂಗಡಗಳ ತತ್ವಗಳನ್ನು ಅವನು ಪ್ರಸಂಗಿಸುವದಿಲ್ಲ, ಆದರೆ ಕೇವಲ ಬೈಬಲ್ ಬೋಧನೆಯನ್ನು ಪ್ರಸಂಗಿಸುವನು. ಅಂಥ ಪ್ರಸಂಗಿಗೆ ಯಾವುದೇ ಸಭಾಪಂಗಡದ ಹಣೆಪಟ್ಟಿಹಚ್ಚುವುದು ಆ ಮನುಷ್ಯನನ್ನೇ ತಪ್ಪಾಗಿ ಪ್ರತಿನಿಧೀಕರಿಸುವುದೂ ಹಾಗೂ ನಮ್ಮ ಕರ್ತನ ಬೋಧನೆಯನ್ನು ತಪ್ಪಾಗಿ ಪ್ರತಿನಿಧೀಕರಿಸುವುದೂ ಆಗಿರುತ್ತದೆ.

ಪರಿಶುದ್ಧಾತ್ಮನು ಈ ಸ್ಪಷ್ಟವಾದ ಉದಾಹಣೆಯೊಂದಿಗೆ, ಸುವಾರ್ತೆಯನ್ನು

ಪ್ರಸಂಗಿಸುವ ಕಾರ್ಯದಲ್ಲಿ ಮತ್ತು ಲೋಕವನ್ನು ರಕ್ಷಿಸುವದರಲ್ಲಿ ನಿಜವಾದ ಹೃದಯಗಳು ಹೇಗೆ ವಿಭಾಗವಾಗಿರಬಹುದು? ಉದಾಹರಣೆಯು ಸ್ಪಷ್ಟವಾಗಿದೆಯೋ? ಅದನ್ನು ನಾವು ಅನುಸರಿಸಬಹುದೋ? ನಿಶ್ಚಯವಾಗಿಯೂ ಅದು ಚೆನ್ನಾಗಿ ಪ್ರಯಾಣಿಸಿದ ದಾರಿಯಂತೆ ಸರಳವಾಗಿದೆ. ಕಲಿಯದೇ ಇದ್ದವನು ಮತ್ತು ಶಾಲೆಗೆ ಹೋಗದವನು ಅದನ್ನು ತಿಳಿದುಕೊಳ್ಳಲಿಕ್ಕಾಗುವಂತೆ, ಯಾವುದೇ ಪ್ರವಾದಿ, ಯಾಜಕ ಇಲ್ಲವೇ ಪ್ರಸಂಗಿಯು ಅದನ್ನು ವ್ಯಾಖ್ಯಾನಿಸುವ ಅಗತ್ಯತೆ ಇರುವದಿಲ್ಲ; ಇದನ್ನು ಓದುವ ಯಾವನೇ ಆಗಲಿ ಗ್ರಹಿಸಿಕೊಳ್ಳುವಷ್ಟು ಇದು ಸರಳವಾದದ್ದಾಗಿದೆ. ಸತ್ಯಕ್ಕಾಗಿ, ಯೇಸುವಿನ ರಕ್ತಕ್ಕಾಗಿಯೂ ಸಹ, ಹುಡುಕುತ್ತಿರುವ ಹೃದಯಗಳು, ತಪ್ಪಾಗಿ ಅರ್ಥಮಾಡಿ ಕೊಳ್ಳುವಷ್ಟು ಪರಿಶುದ್ಧಾತ್ಮನು ಮಾತಾಡಿರುವ ಸಾಧ್ಯತೆಯಿದೆಯೋ? ಅವರು ಪಕ್ಷಗಳಾಗಿ ಬೇರೆಯಾಗುವಷ್ಟು, ಪ್ರತಿಯೊಬ್ಬನು ತನ್ನ ಸ್ವಂತ ಪಕ್ಷವನ್ನು ಕಟ್ಟುವಷ್ಟು ಆತ್ಮನ ಬೋಧನೆಯು, ಒಂದೇ ಮನಸ್ಸುಳ್ಳವರೂ ಒಂದೇ ಅಭಿಪ್ರಾಯವುಳ್ಳವರೂ ಆಗಿರಬೇಕೆಂದು ಯೇಸುವು ಬೇಡಿಕೊಳ್ಳುವಾಗ, ಅಷ್ಟು ಅಸ್ಪಷ್ಟವಾದದ್ದಾಗಿರುವುದೋ? ತಪ್ಪು ಎಲ್ಲಿದೆ? ಆ ಹೃದಯಗಳು ಆತನನ್ನು ತಿಳಿಯದಷ್ಟು ಪರಿಶುದ್ಧಾತ್ಮನು ಬೋಧಿಸಿದ್ದರೆ, ಆಗ ನಾವು ಒಂದಾಗಿರ ಬೇಕೆಂಬ ಪರಿಶುದ್ಧಾತ್ಮನ ಚಿನ್ಹಗಳು ನಿಶ್ಚಯವಾಗಿಯೂ ವ್ಯರ್ಥವಾದವುಗಳಾಗುತ್ತವೆ.

ಪೇತ್ರನು ಪ್ರಸಂಗಿಸಿದ ಜನರು ಬಾಪ್ತಿಸ್ಮದ ಮೊದಲು ರಕ್ಷಣೆ ಹೊಂದಿದರೋ ಇಲ್ಲವೇ ಅನಂತರ ರಕ್ಷಣೆ ಹೊಂದಿದರೋ? ಇಲ್ಲಿ ಮಾರ್ಗದಲ್ಲಿ ಒಂದು ಕವಲೊಡೆಯುವಿಕೆ ಇರುತ್ತದೆ. ಇಲ್ಲಿ ಒಳ್ಳೆಯ ಮತ್ತು ನಿಜವಾದ ಹೃದಯಗಳು ಒಂದು ಇನ್ನೊಂದರಿಂದ ಬೇರೆಯಾಗುತ್ತವೆ. ಅದು ಅಗತ್ಯವಾಗಿದೆಯೋ? ಪಂಚಾಶತ್ತಮ ದಿನದಂದು ಬಾಪ್ತಿಸ್ಮ ಹೊಂದಿದ ಈ ವಿಷಯದಲ್ಲಿ ಒಪ್ಪಿಕೊಳ್ಳುವದಿಲ್ಲವೋ? ಇಲ್ಲವೇ ಅವರು ಒಂದಾಗಿದ್ದರೋ? ಕೂಟವು ಮುಕ್ತಾಯಗೊಂಡಾಗ, ಬಾಪ್ತಿಸ್ಮಕ್ಕಿಂತ ಮೊದಲು ರಕ್ಷಿಸಲ್ಪಟ್ಟಿದ್ದೇವೆಂದು ಹೇಳಿದ ಒಂದು ಗುಂಪು ಹಾಗೂ ಬಾಪ್ತಿಸ್ಮದ ನಂತರ ರಕ್ಷಣೆ ಹೊಂದಿದೆವು ಎಂದು ಹೇಳಿದ ಇನ್ನೊಂದು ಪಂಗಡವು ಇತ್ತೋ? ಇಲ್ಲ, ಅಲ್ಲಿ ಇರಲಿಲ್ಲ, ಮತ್ತು ಅಲ್ಲಿ ಅಂಥ ವಿಭಜನೆ ಇರಲಿಲ್ಲವೆಂದು ಪ್ರತಿಯೊಬ್ಬರೂ ತಿಳಿದಿದ್ದರು. ಯಾಕೆ ಇರಲಿಲ್ಲ? ಈ ಜನರು ಜಗತ್ತಿನ ಎಲ್ಲಾ ಭಾಗಗಳಿಂದ ಕೂಡಿಬಂದಿರಲಿಲ್ಲವೇ? ಅವರು ಭಿನ್ನವಾದ ಭಾಷೆಗಳನ್ನು ಮಾತಾಡುವವರಾಗಿರಲಿಲ್ಲವೇ ಮತ್ತು ಭಿನ್ನವಾದ ಪ್ರಭಾವಗಳಲ್ಲಿಯೂ ಭಿನ್ನವಾದ ಪರಿಸರಗಳಲ್ಲಿಯೂ ಬೆಳಸಲ್ಪಟ್ಟಿರಲಿಲ್ಲವೇ? ಅವರು ತಮ್ಮ ವಿವಿಧ ಪ್ರಕೃತಿಗಳಲ್ಲಿ, ಭಾವನೆಗಳಲ್ಲಿ, ಮನೆಯ ಪ್ರಭಾವಗಳಲ್ಲಿ ಮತ್ತು ಇಂದಿನ ಯಾವುದೇ? ಶ್ರೋತೃ ಸಮೂಹದಂತೆ ಮೊದಲ ತರಬೇತಿಯಿದ್ದವರೂ ಆಗಿದ್ದರಲ್ಲವೇ? ಹಾಗಿದ್ದರೂ, ಪೇತ್ರನು "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ... ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38) ಎಂದು ಹೇಳಿದ ಕೂಡಲೇ ಆ ವಿಶಾಲವಾದ ಜನಸಮೂಹದಲ್ಲಿಯ ಪ್ರತಿಯೊಬ್ಬರೂ ಪೇತ್ರನ ಪ್ರಸಂಗವನ್ನು ಅರ್ಥಮಾಡಿಕೊಂಡರು, ನಾವು ಯಾಕೆ ಅರ್ಥಮಾಡಿಕೊಳ್ಳಬಾರದು? ಯಾವುದು - ಭಿನ್ನತೆ ಮಾಡುತ್ತದೆ? ನಿಜ, ನಮಗೆ ಪೇತ್ರನ ಪ್ರಸಂಗದ ಭಾಷಾಂತರವು ಇರುವುದು, ಆದರೆ ನಮ್ಮ ಭಾಷಾಂತರವು ಸತ್ಯವಾಗಿರುವುದೇ? ಪೇತ್ರನ ವಿಚಾರಗಳು ಇಡಲ್ಪಟ್ಟ ಇಂಗ್ಲೀಷ್ ಪದಗಳ ಅರ್ಥಮಾಡಿಕೊಳ್ಳಲು ಕಷ್ಟಕರವಾದವುಗಳಾಗಿರುವವೋ?

ಎಲ್ಲಾ ಸಮಯದಲ್ಲಿ ಯೇಸುವು ಅವರು ಒಂದಾಗಿರಬೇಕೆಂದು ಪ್ರಾರ್ಥಿಸುತ್ತಿರುವಾಗ ಮತ್ತು ಬೇಡಿಕೊಳ್ಳುತ್ತಿರುವಾಗ, ಪಕ್ಷಗಳಾಗಿ ಬೇರೆಯಾಗಲಿಕ್ಕಾಗುವಂತೆ, ದೇವರ ಜನರಲ್ಲಿ ಪಕ್ಷಪಂಗಡಗಳನ್ನು ಮಾಡುವಂತೆ, "ನಿಮ್ಮ ಪಾಪಗಳ ಪಾಲಿಹಾರಕ್ಕಾಗಿ"

ಎಂಬ ವ್ಯಕ್ತಪಡಿಸುವಿಕೆಯಲ್ಲಿ "unto" ಎಂಬ ಚಿಕ್ಕ ಪದವನ್ನು ಯಥಾರ್ಥ ಹೃದಯ ಗಳು ತಪ್ಪಾಗಿಮಾಡಿಕೊಳ್ಳುವವೆಂದು, ಪ್ರಿಯ ಸ್ನೇಹಿತರೇ ನೀವು ನಂಬುವಿರೋ? ನಿಶ್ಚಯ ವಾಗಿಯೂ "unto" ಎಂಬ ಚಿಕ್ಕ ಪದವು ಅಷ್ಟು ದ್ವಂದ್ವಾರ್ಥವುಳ್ಳದ್ದಾಗಿರುವದಿಲ್ಲ. ಸರಳವಾದ ಆಂಗ್ಲೋ - ಸಾಕ್ಷನ್ ಪದದ ಅರ್ಥವೂ ಕಥೆಯನ್ನು ಹೇಳುತ್ತದೆ. ಅದು ವಾಕ್ಯಭಾಗದ ಅರ್ಥಕ್ಕೆ ಬೀಗದ ಕೈಯಾಗಿರುತ್ತದೆ. "ನಿಶ್ಚಯವಾಗಿಯೂ, ಧಾರ್ಮಿಕ ಜಗತ್ತಿನಲ್ಲಿ ದೊಡ್ಡ ವಿಭಜನೆಯು ನಾವು ಯಾವಾಗ ರಕ್ಷಿಸಲ್ಪಟ್ಟೆವು - ಬಾಪ್ತಿಸ್ಮದ ಮೊದಲೋ ಇಲ್ಲವೇ ಅನಂತರವೋ ಎಂಬ ಪ್ರಶ್ನೆಯ ಮೇಲೆ ಇರುವುದು. ಆದರೆ 'unto' ಎಂಬಂಥ ಪದಗಳ ಅರ್ಥದ ಮೇಲೆ ಅಲ್ಲ" ಎಂದು ಒಬ್ಬನು ಹೇಳಬಹುದು. ಹೆಚ್ಚು ನಿಶ್ಚಯವಾಗಿ ಅದು ಸತ್ಯವಾಗಿದೆ. ವಿಭಜನೆಗೆ ಯಾವುದೇ ನೆವವಿರುವದಿಲ್ಲ. ನಾವು ಒಂದಾಗಿರುವದಕ್ಕಾಗಿ ನಮ್ಮ ರಕ್ಷಕನ ಬಿನ್ನಹಗಳನ್ನು ಸಂಪೂರ್ಣವಾಗಿ ನಾವು ಕಡೆಗಣಿಸಿದರೆ ಮಾತ್ರವೇ ಸಭಾಪಂಗಡತ್ವವು ಮುಂದುವರಿಯಬಹುದು.

ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಬೇಕೆಂದು ಪೇತ್ರನು ಈ ಜನರಿಗೆ ಹೇಳಿದಾಗ, ಒಂದು ಮಹತ್ವದ ಅರ್ಥದಲ್ಲಿ ಪಾಪಗಳ ಕ್ಷಮಾಪಣೆಯೊಂದಿಗೆ ಅವನು ಬಾಪ್ತಿಸ್ಮವನ್ನು ಸಂಬಂಧಿಸಿದನು. ಅವನ ಅರ್ಥವೇನಾಗಿತ್ತು? ನಾವು ಮುಂದಿನ ಪಾಠದಲ್ಲಿ ನೋಡುವೆವು.

© 2009 Truth for Today